ನಂತರ ರೂಮಿಗೆ ಹೋಗಿ ಮಲಗಿದ್ದವಳನ್ನು ಕಾಡಿದ್ದು ಹಳೆಯ ನೆನಪುಗಳೇ.

'ವಯಸ್ಸೆನ್ನ?' ಪ್ರಶ್ನೆ ಬಂದತ್ತ ತಿರುಗಿ ನೋಡಿದೆ. ತಲೆ ಆಡಿಸಿದೆ. 'ಗೊತ್ತಿಲ್ಲ' ಎಂಬಂತೆ. 'ಮುಪ್ಪದು ಇರುಕ್ಕಲಾಮಾ?' ಆಕೆ ಕೇಳಿದಳು. ಮತ್ತೆ ತಲೆ ಆಡಿಸಿದೆ. '28 ಇರಕ್ಕಲಾ...' ಆಕೆಯ ಗಂಡ ಹೇಳಿದ. 'ಏಯ್ಯ ವಾಯಮೂಡಿ ಸಾಪಡ್(ಏಯ್ ಬಾಯಿ ಮುಚ್ಚಿ ತಿನ್ನು)' ಸರ್‍ರನೆ ಅವನ ಕೈಯಲ್ಲಿದ್ದ ಎಲೆಯ ಮೇಲೆ ಒಂದು ಚಪಾತಿ ಹಾಕಿದಳು ದಢೂತಿ ಹೆಣ್ಣುಮಗಳು. ನಾನು ಸುಮ್ಮನೇ ಕುಳಿತೆ. ಅವರಿಬ್ಬರೂ ತಿಂದ ನಂತರ ಉಳಿದ ಚಪಾತಿ ಪಲ್ಯಗಳನ್ನು ಒಂದು ಎಲೆಯಲ್ಲಿ ಹಾಕಿ 'ಕೈಕಾಟ್ಟ್' ಅಂದಳು. ಕೈ ನೀಡಿದೆ. ಮೇಲಿನಿಂದ ಕೈಗೆ ಧಪಕ್ಕೆಂದು ಹಾಕಿದಳು 'ಸಾಪಡ್' ಅಂದಳು. ಮೌನವಾಗಿ ತಿಂದೆ. 'ಪೇಸ ವರಲ್ಲಯಾ? ಮೂಗಿಯಾ?' ಮತ್ತೆ ಕೇಳಿದಳು ನಾನು ಕಣ್ಣು ಮುಚ್ಚಿ ಸೀಟಿಗೆ ಒರಗಿದೆ.

ಹೌದು ನಾನು ಅವತ್ತು ಈ ಹಳ್ಳಿಗೆ, ನನ್ನ ಹಳ್ಳಿಗೆ ಬರುವ ರೈಲಿನಲ್ಲಿ ಪಯಣಿಸುತ್ತಿದ್ದೆ. ನನಗೆಷ್ಟು ವರ್ಷ. ತಿಳಿಯದು. ಎಲ್ಲೆಲ್ಲೋ ಹೇಗೆ ಹೇಗೋ ಇದ್ದ ನನ್ನನ್ನು ಉಳಿಸಿದ್ದು ಕೇವಲ ನನ್ನ ಹಳ್ಳಿಯ ನೆನಪು. ನನ್ನ ಕೆದರಿದ ಕೂದಲು, ಹರುಕು ಮುರುಕು ಸೀರೆ, ಲಂಗ ಎಲ್ಲವೂ ಸೇರಿದ ವಿಚಿತ್ರ ವೇಷ. ಕಂಡ ಕಂಡಲ್ಲಿ, ಬಿಸಿಲಲ್ಲಿ, ಚಳಿಯಲ್ಲಿ, ಮಳೆಯಲ್ಲಿ ಅಲೆದಲೆದು ಬಣ್ಣಗೆಟ್ಟ ಮುಖ, ಕಂಗಳು... ಎಣ್ಣೆ ಕಾಣದ ಕೂದಲು... ಹುಚ್ಚಿ ಎನ್ನಲು ಯಾವುದೇ ಅನುಮಾನ ಬೇಡ. ಕರೆದೊಯ್ದ ಜಾಗದಲ್ಲೆಲ್ಲ ಅಲೆದಾಡಿ, ಅಲೆದಾಡಿ, ಸ್ಮೃತಿ ತಪ್ಪಿದಂತಿದ್ದ ನನ್ನ ಬದುಕು ಸಾಧುಗಳ ತಂಡವೊಂದಕ್ಕೆ ನಾಗಪುರದಲ್ಲಿ ಸಿಕ್ಕಿತ್ತು. ಅಲ್ಲಿಯೂ ಅಷ್ಟೆ. ಮಾತಿಲ್ಲ ಕತೆಯಿಲ್ಲ. ಕೊನೆಗೆ ಒಬ್ಬ ಕರುಣಾಳು ಸಾಧು 'ಭೂಕ್ ನಹಿ ಹೈ ಕ್ಯಾ?' ಅಂದಾಗ 'ಪಸಿಯಾ?' ಎಂದು ನಕ್ಕೆ. ಕಳೆದ ಅನೇಕ ವರ್ಷಗಳಲ್ಲಿ ನಾನಾಡಿದ ಮೊದಲ ಮಾತು!! ನನ್ನ ಭಾಷೆ ಕೇಳಿ ನಾನು ದಕ್ಷಿಣದವಳು ಎಂದು ತಿಳಿದು ಅನೇಕ ಪ್ರಶ್ನೆಗಳನ್ನು ಕೇಳಿದ್ದ. ಅವನಿಗೆ ಹೇಳಲು ನನ್ನ ಬಳಿ ಉಳಿದಿದ್ದು ಕೇವಲ ನನ್ನ ಹಳ್ಳಿಯ ಹೆಸರು ಮಾತ್ರ. ಕನ್ಯಾಕುಮಾರಿ ರೈಲಿನಲ್ಲಿ ಟಿಕೇಟು ತೆಗೆದುಕೊಟ್ಟು ಕೂರಿಸಿದ್ದ. 'ಪ್ರಪಂಚ ಕೆಟ್ಟದಿದೆ ಮಗಳೇ. ಹೇಗಾದರೂ ನಿನ್ನೂರಿನಲ್ಲಿ ಬದುಕು ಹೋಗು. ನಿನಗೆ ಒಳ್ಳೆಯದಾಗಲಿ' ಎಂದಿದ್ದ.

ಹೌದು ನನ್ನ ಹಳ್ಳಿ ಅದು 'ಅಮ್ಮಪ್ಪಳ್ಳಿ'. ಸಣ್ಣ ಹಳ್ಳಿ. ಅದು ಅಮ್ಮನ ಹಳ್ಳಿ. ಅಮ್ಮ ಎಂದರೆ ಅವಳು ಗ್ರಾಮದೇವತೆ. ಅವಳಿಗೇ ಮಹತ್ವ. ಅವಳು ಇಷ್ಟಪಟ್ಟದ್ದೆಲ್ಲ ನಡೆಯಲೇ ಬೇಕು. ಇಲ್ಲವಾದಲ್ಲಿ ಸುಟ್ಟುಬಿಡುತ್ತಾಳೆ. ಆ ಹಳ್ಳಿಯಲ್ಲಿ ಸಂಪ್ರದಾಯಸ್ಥ ಕುಟುಂಬದಲ್ಲಿ ಬೆಳೆದವಳು ನಾನು. ಚಿಕ್ಕಂದಿನಿಂದಲೇ ನನಗೆ ನೃತ್ಯ ಒಲಿದಿತ್ತು. 'ಪೊನ್ನಂಬಾಳ್' ನನ್ನ ನೃತ್ಯ ಗುರು. ತೆಳ್ಳಗೆ ನೀಳವಾಗಿದ್ದ ನನ್ನ ದೇಹ ನೃತ್ಯಕ್ಕೆ ಹೇಳಿಮಾಡಿಸಿದಂತಿದೆ ಎಂದು ಆಕೆಗೆ ನನ್ನ ಕಂಡರೆ ಅಭಿಮಾನ. ನನ್ನ ರೂಪ, ಬಣ್ಣ, ಬಾಗು, ಬಳುಕು ಎಲ್ಲವೂ ಆಕೆಗೆ ಪ್ರಿಯ. ಎಲ್ಲಕ್ಕಿಂತ ಹೆಚ್ಚಾಗಿ ಹೆಜ್ಜೆಗಳನ್ನು ಕ್ಷಣಮಾತ್ರದಲ್ಲಿ ಗ್ರಹಿಸಿಬಿಡುತ್ತಿದ್ದೆ. ಕರಣ, ಹಸ್ತಗಳೆಲ್ಲದರಲ್ಲೂ ಪ್ರೌಢವಾದ ಅಭಿನಯ ತೋರುತ್ತಿದ್ದೆ. ನನ್ನನ್ನು ಕಂಡರೆ ಹಳ್ಳಿಯಲ್ಲಿ ಎಲ್ಲರಿಗೂ ಪ್ರೀತಿ.

ಧಡಕ್ಕೆಂದು ರೈಲು ನಿಂತಿತು. ಎಚ್ಚರಗೊಂಡೆ. ಯಾವುದೋ ಸ್ಟೇಷನ್. ದಢೂತಿ ಅಮ್ಮನ ದೇಹಕ್ಕೆ ನನ್ನ ಹರುಕಲು ಸೀರೆ ತಾಗಿಬಿಟ್ಟಿತು. ಅವಳು ತಾರಕ ಸ್ವರದಲ್ಲಿ ಬಯ್ಯಲು ಮೊದಲು ಮಾಡಿದಳು. ನನಗೆ ಅದು ಯಾವುದೂ ಹೊಸತಲ್ಲ. ಎಷ್ಟು ಬೈಗುಳ ತಿಂದಿದ್ದೆನೋ! ಸೀರೆ ಮುದುರಿ ಸುಮ್ಮನೇ ಕುಳಿತೆ. ಹಸಿವೆಗೂ, ಮೈಲಿಗೆಗೂ ಬಹಳ ಅಂತರವಿದೆ.

ರೈಲು ಹೊರಟಿತು. ನನ್ನ ನೆನಪುಗಳೂ ಕೂಡ. ಅಮ್ಮ, ಅಣ್ಣ, ಅಪ್ಪ, ಅಕ್ಕ... ಹಳ್ಳಿತುಂಬಾ